# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿಸಿ ನಂ. 890/2024

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

**ವಿರುದ್ಧ**

ಆರೋಪಿತರುಃ ಪ್ರದೀಪ್ ಆರ್
ತಂದೆ ರವಿನಾಯ್ಕ, 26 ವರ್ಷ
ವಾಸಃ ಹಳೇಯಳನಾಡು ಗ್ರಾಮ,
ಹಿರಿಯೂರು ತಾಲ್ಲೂಕು

## ದೋಷಾರೋಪಣೆ

**ನಾನು ಶ್ರೀಮತಿ. ಸುಜಾತ ಸುವರ್ಣ.ಬಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ**

ದಿನಾಂಕ 04.06.2024 ರಂದು ಸಂಜೆ 8 ರ ಸಮಯದಲ್ಲಿ ಹಿರಿಯೂರು ತಾಲ್ಲೂಕು ಹಳೇಯಳನಾಡು ಲಂಬಾಣಿತಾಂಡ ಗ್ರಾಮದ ಶ್ರೀ ಸೇವಾಲಾಲ್ ಸಮುದಾಯ ಭವನದ ಮುಂದಿನ ಅಂಗಳದಲ್ಲಿ ಚಾಸಾ.1 ಮತ್ತು 2 ರವರು ಕುಳಿತಿರುವಾಗ್ಗೆ ಆರೋಪಿಯು ಚಾಸಾ.1 ರವರ ನಿವೇಶನವನ್ನು ನನಗೆ ಕೊಡಬೇಕು ಎಂದು ಕೇಳಿದ್ದು ಅದಕ್ಕೆ ಚಾಸಾ.2 ರವರು ನಿವೇಶನ ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ಆರೋಪಿಯಾದ ನೀವು ಚಾಸಾ.1 ಮತ್ತು 2 ರವರನ್ನು ಶಾಂತಿಭಂಗವುಂಟು ಮಾಡುವ ಉದ್ದೇಶದಿಂದ ಅವರನ್ನು ಉದ್ರೇಕಿಸುವ ಸಲುವಾಗಿ ಸೂಳೆಮಗನೇ ಬೋಳಿಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಆ ಮೂಲಕ ನೀವು ಭಾ ದಂ ಸಂ ಕಲಂ 504 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

2. ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸ್ವಯಿಚ್ಛೆಯಿಂದ ಚಾಸಾ.2 ರವರಿಗೆ ಕೈ ಕಾಲಿನಿಂದ ಹೊಡೆದು ನೋವುಂಟುಪಡಿಸಿದ್ದು ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 323 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

3. ಮೇಲ್ಕಂಡ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಸ್ವಯಿಚ್ಛೆಯಿಂದ ಜಗಳ ಬಿಡಿಸಿಕೊಳ್ಳಲು ಹೋದ ಚಾಸಾ.1 ರವರಿಗೆ ಕಲ್ಲಿನಿಂದ ತಲೆಗೆ ಹೊಡೆದು ನೋವುಂಟುಪಡಿಸಿದ್ದು ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 324 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ.1 ರವರಿಗೆ ನನಗೆ ನಿಮ್ಮ ಸೈಟನ್ನುಕೊಡದಿದ್ದರೆ ನಿಮ್ಮನ್ನು ಕೊಲೆ ಮಾಡುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ ದಂ ಸಂ ಕಲಂ 506 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ.

( ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ 24.09.2025

ಸ್ಥಳಃ ಹಿರಿಯೂರು

(ಸುಜಾತ ಸುವರ್ಣ. ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಹಿರಿಯೂರು.